ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	15 (46)
ಸದಸ್ಯರ ಹೆಸರು	ಶ್ರೀ ಎನ್ ರವಿಕುಮಾರ್ (ವಿಧಾನ ಸಭಾ ಕ್ಷೇತ್ರ)
ವಿಷಯ	ನಿರಾಧಾರ ವಿಧವಾ ವೇತನ ಕುರಿತು
ಉತ್ತರಿಸಬೇಕಾದ ದಿನಾಂಕ	15-02-2022
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	**ಉತ್ತರ**
ಅ) ಕಳೆದ 5 ವರ್ಷಗಳಲ್ಲಿ ನಿರಾಧಾರ ವಿಧವಾ ವೇತನ ಯೋಜನೆಯನ್ವಯ ಎಷ್ಟು ಫಲಾನುಭವಿಗಳಿಗೆ ಮಾಸಾಶನವನ್ನು ವಿತರಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ಕಳೆದ 5 ವರ್ಷಗಳಲ್ಲಿ ನಿರಾಧಾರ ವಿಧವಾ ವೇತನ ಯೋಜನೆಯಡಿ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ) ಆಧಾರ್ ಸಂಖ್ಯೆಯನ್ನು ಈ ಯೋಜನೆಯ ಫಲಾನುಭವಿಗಳ ಗುರುತಿಗಾಗಿ ಜೋಡಿಸಲಾಗಿದೆಯೇ; (ಇಲ್ಲವಾದಲ್ಲಿ ಯಾವಾಗ ಜೋಡಿಸಲಾಗುವುದು	ಫಲಾನುಭವಿಗಳನ್ನು ನಿಖರವಾಗಿ ಗುರುತಿಸುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಯೋಜನೆಗಳಡಿ ಆಧಾರ್ ಸಂಖ್ಯೆಯನ್ನು ಕಡ್ಡಾಯಗೊಳಿಸಿದೆ. ವಿಧವಾ ವೇತನ ಪಡೆಯುತ್ತಿರುವ ಒಟ್ಟು 17.72 ಲಕ್ಷ ಫಲಾನುಭವಿಗಳಲ್ಲಿ ಇದುವರೆವಿಗೆ 17.02 ಲಕ್ಷ ಫಲಾನುಭವಿಗಳಿಗೆ ಆಧಾರ್ ಸಂಖ್ಯೆ ಜೋಡಣೆಯಾಗಿದೆ. ಉಳಿದ 70615 ಫಲಾನುಭವಿಗಳ ಆಧಾರ್ ಸಂಖ್ಯೆ ಜೋಡಣೆ ಕಾರ್ಯ ಪ್ರಗತಿಯಲ್ಲಿದೆ.
ಇ) ಈಗ ನೀಡುತ್ತಿರುವುದು ರೂ 600/-ಗಳ ಮಾಸಾಶನವನ್ನು ಕನಿಷ್ಠ ರೂ 2000/-ಗಳಿಗೆ ಹೆಚ್ಚಿಸುವ ಕುರಿತು ಸರ್ಕಾರದ ನಿಲುವೇನು?	18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಾಗೂ ಕಾನೂನು ರೀತ್ಯಾ ಪತಿ ಮೃತ ಪಟ್ಟಿರುವ ನಿರ್ಗತಿಕ ವಿಧವೆಯರಿಗೆ ಆರ್ಥಿಕ ನೆರವು ಒದಗಿಸುವ ನಿಟ್ಟಿನಲ್ಲಿ ವಿಧವಾ ವೇತನ ಜಾರಿಗೊಳಿಸಲಾಗಿದ್ದು, ಇತ್ತೀಚಿನ ಆರ್ಥಿಕ ಬೆಳವಣಿಗೆ, ಬೆಲೆ ಏರಿಕೆ ಹಾಗೂ ಸೂಚ್ಯಂಕ ದರ ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ ಕಂಇ 39 ಎಮ್‌ಎಸ್‌ಟಿ 2021, ಬೆಂಗಳೂರು ದಿನಾಂಕ: 31-07-2021 ರನ್ವಯ ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ 600/- ರಿಂದ ರೂ 800/- ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಈ ಪಿಂಚಣಿ ಹೆಚ್ಚಳವು ದಿನಾಂಕ: 01-08-2021 ರಿಂದ ಜಾರಿಗೆ ಬಂದಿರುತ್ತದೆ. ಇದರಿಂದ 17.72 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಿದೆ. ಸದರಿ ಯೋಜನೆಯಲ್ಲಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳು 65 ವರ್ಷ ಪೂರ್ಣಗೊಂಡಲ್ಲಿ ಅಂತಹ ಪ್ರಕರಣಗಳನ್ನು ತಂತ್ರಾಂಶದ ಮೂಲಕ ಗುರುತಿಸಿ ಇಂದಿರಾಗಾಂಧಿ ವೃದ್ಧಾಪ್ಯ ವೇತನ ಯೋಜನೆಗೆ ವರ್ಗಾಯಿಸಿ ಅವರಿಗೆ ಹೆಚ್ಚಿನ ಪಿಂಚಣಿ ರೂ 1200/- ಮಾಸಿಕ ಪಿಂಚಣಿ ವಿತರಿಸುವಲ್ಲಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: DSSP/LALCOLAQ/3/2022

(ಆರ್.ಅಶೋಕ)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ (ವಿಧಾನ ಸಭಾ ಕ್ಷೇತ್ರ) ರವರ ಚುಕ್ಕೆ ಗುರುತಿನ
ಪ್ರ ಸಂ 15(46) ಕ್ಕೆ ಅನುಬಂಧ-1

SL NO	DISTRICT NAME	TOTAL DWP PENSIONERS	DWP_Emo	DWP_BANK/POSB	AADHAR SEEDED
1	Bagalkot	64424	430	63994	64697
2	Ballari	89079	4510	84569	88783
3	Bangalore Rural	30756	2788	27968	31215
4	Belagavi	129483	3150	126333	132138
5	Bengaluru	131246	12241	119005	104803
6	Bidar	45799	1519	44280	45294
7	Chamarajanagar	44857	2219	42638	42294
8	Chikballapur	38686	772	37914	38715
9	Chikkamagaluru	37282	988	36294	36703
10	Chitradurga	50803	5046	45757	50319
11	Dakshina Kannada	47816	1455	46361	47700
12	Davanagere	54764	6939	47825	54689
13	Dharwad	54055	2361	51694	55390
14	Gadag	36122	1397	34725	36542
15	Hassan	68353	241	68112	65811
16	Haveri	58268	3686	54582	57656
17	Kalaburagi	52376	2573	49803	52799
18	Kodagu	14711	167	14544	14763
19	Kolar	49090	2703	46387	47439
20	Koppal	45204	3870	41334	44823
21	Mandya	86056	2792	83264	85150
22	Mysuru	104546	4867	99679	103755
23	Raichur	58325	6441	51884	58733
24	Ramanagara	48733	6140	42593	47446
25	Shivamogga	44469	4259	40210	44795
26	Tumakuru	87247	12631	74616	88503
27	Udupi	35601	764	34837	35924
28	Uttara Kannada	36763	2217	34546	37189
29	Vijayapura	56307	2214	54093	57270
30	Yadgir	30462	1459	29003	30582
	Grand Total	**1772063**	**102839**	**1669224**	**1701920**

ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ (ವಿಧಾನ ಸಭಾ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರ ಸಂ 15(46) ಕ್ಕೆ ಅನುಬಂಧ-2

ಕ್ರ.ಸಂ	ಜಿಲ್ಲೆ	[redacted]				2022 (ಜನವರಿ-2022 ಅಂತ್ಯಕ್ಕೆ)
1	ಬಾಗಲಕೋಟೆ	59,244	61,311	62,078	57,579	64,427
2	ಬಳ್ಳಾರಿ	74,638	76,923	77,251	88,431	89,067
3	ಬೆಳಗಾವಿ	1,19,651	1,24,532	30,199	1,25,030	1,29,472
4	ಬೆಂಗಳೂರು ಗ್ರಾಮಾಂತರ	30,216	31,266	1,26,211	27,873	30,753
5	ಬೆಂಗಳೂರು ನಗರ	1,13,768	1,23,378	91,573	1,22,349	1,31,247
6	ಬೀದರ್	41,477	43,559	44,344	41,838	45,795
7	ಚಾಮರಾಜನಗರ	62,191	62,190	42,944	44,117	44,916
8	ಚಿಕ್ಕಬಳ್ಳಾಪುರ	36,162	37,621	38,000	39,719	38,711
9	ಚಿಕ್ಕಮಗಳೂರು	34,215	35,596	35,179	36,371	37,240
10	ಚಿತ್ರದುರ್ಗ	57,979	59,722	51,264	48,424	50,504
11	ದಾವಣಗೆರೆ	55,277	58,697	45,874	52,462	54,769
12	ಧಾರವಾಡ	63,433	63,276	54,654	56,190	53,924
13	ಗದಗ	36,627	37,507	51,733	34,819	36,121
14	ಹಾಸನ	68,176	70,153	35,787	68,870	68,567
15	ಹಾವೇರಿ	56,643	56,952	64,130	58,579	58,360
16	ಕಲ್ಬುರ್ಗಿ	49,895	53,581	57,710	49,570	52,377
17	ಉತ್ತರಕನ್ನಡ	34,110	34,825	50,333	36,165	36,767
18	ಕೋಲಾರ	46,457	48,556	14,535	47,638	49,093
19	ಕೊಪ್ಪಳ	40,995	41,735	42,855	43,588	45,201
20	ಕೊಡಗು	13,690	14,308	43,694	14,377	14,711
21	ಮಂಡ್ಯ	1,28,583	1,30,052	86,179	87,733	86,051
22	ದಕ್ಷಿಣ ಕನ್ನಡ	43,888	46,221	96,415	47,339	47,816
23	ಮೈಸೂರು	99,228	1,00,674	57,669	94,100	1,04,583
24	ರಾಯಚೂರು	53,006	56,178	49,397	57,811	58,378
25	ರಾಮನಗರ	51,161	51,470	43,958	50,011	48,760
26	ಶಿವಮೊಗ್ಗ	34,897	39,159	85,634	42,612	44,504
27	ತುಮಕೂರು	80,006	83,917	35,060	83,505	87,243
28	ಉಡುಪಿ	34,457	35,737	35,362	35,442	35,605
29	ವಿಜಯಪುರ	55,348	57,501	53,854	52,948	56,391
30	ಯಾದಗಿರಿ	29,361	30,230	31,809	27,887	30,462
	ಒಟ್ಟು	17,04,779	17,66,827	16,35,685	16,73,377	17,31,815

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್ ರವಿಕುಮಾರ್ (ವಿಧಾನ ಸಭಾ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 15 (46) ಕ್ಕೆ ಪೂರಕ ಟಿಪ್ಪಣಿ.

ವಿಷಯ: ನಿರಾಧಾರ ವಿಧವಾ ವೇತನ ಕುರಿತು.

18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಾಗೂ ಕಾನೂನು ರೀತ್ಯಾ ಪತಿ ಮೃತ ಪಟ್ಟಿರುವ ನಿರ್ಗತಿಕ ವಿಧವೆಯರಿಗೆ ಆರ್ಥಿಕ ನೆರವು ಒದಗಿಸುವ ನಿಟ್ಟಿನಲ್ಲಿ ವಿಧವಾ ವೇತನ ಜಾರಿಗೊಳಿಸಲಾಗಿದೆ. ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ 32,000/- ಗಳಿಗಿಂತ ಕಡಿಮೆ ಇರುವ ಕುಟುಂಬದಲ್ಲಿನ ವಿಧವೆಯರಿಗೆ ವಿಧವಾ ವೇತನವನ್ನು ಕಂದಾಯ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ.

ಇತ್ತೀಚಿನ ಆರ್ಥಿಕ ಬೆಳವಣಿಗೆ, ಬೆಲೆ ಏರಿಕೆ ಹಾಗೂ ಸೂಚ್ಯಂಕ ದರ ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ ಕಂಇ 39 ಎಮ್‌ಎಸ್‌ಟಿ 2021, ಬೆಂಗಳೂರು ದಿನಾಂಕ: 31-07-2021 ರನ್ವಯ ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ 600/- ರಿಂದ ರೂ 800/- ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಈ ಪಿಂಚಣಿ ಹೆಚ್ಚಳವು ದಿನಾಂಕ: 01-08-2021 ರಿಂದ ಜಾರಿಗೆ ಬಂದಿರುತ್ತದೆ. ಇದರಿಂದ 17.72 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಿದೆ.

ವಿಧವಾ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳು 65 ವರ್ಷ ಪೂರ್ಣಗೊಂಡಲ್ಲಿ ಅಂತಹ ಪ್ರಕರಣಗಳನ್ನು ತಂತ್ರಾಂಶದ ಮೂಲಕ ಗುರುತಿಸಿ ಇಂದಿರಾಗಾಂಧಿ ವೃದ್ಧಾಪ್ಯ ವೇತನ ಯೋಜನೆಗೆ ವರ್ಗಾಯಿಸಿ ಅವರಿಗೆ ಹೆಚ್ಚಿನ ಪಿಂಚಣಿ ರೂ 1200/- ಮಾಸಿಕ ಪಿಂಚಣಿ ವಿತರಿಸುವಲ್ಲಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇಂದಿರಾಗಾಂಧಿ ವಿಧವಾ ವೇತನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಮಾಸಿಕ ಪಿಂಚಣಿಯಲ್ಲಿ ರೂ 300/- ಪಾಲನ್ನು ಕೇಂದ್ರ ಸರ್ಕಾರವು ಬಿಡುಗಡೆಗೊಳಿಸುತ್ತಿದೆ. ಉಳಿದ ರೂ. 500/- ಗಳ ಪಾಲನ್ನು ರಾಜ್ಯ ಬೊಕ್ಕಸದಿಂದ ಭರಿಸಲಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 17.72 ಲಕ್ಷ ಫಲಾನುಭವಿಗಳಿಗೆ ವಿಧವಾ ವೇತನ ಸೌಲಭ್ಯ ನೀಡಲಾಗುತ್ತಿದ್ದು, ಇದಕ್ಕಾಗಿ ಸರ್ಕಾರವು 2021-22 ನೇ ಸಾಲಿನಲ್ಲಿ ರೂ 1297.46 ಕೋಟಿ ಅನುದಾನವನ್ನು ಒದಗಿಸಿದೆ. ಈ ಪೈಕಿ ಕೇಂದ್ರ ಸರ್ಕಾರವು 4.52 ಲಕ್ಷ ಫಲಾನುಭವಿಗಳಿಗೆ ಕೇಂದ್ರದ ಪಾಲನ್ನು ನೀಡುತ್ತಿದ್ದು ವಾರ್ಷಿಕ ರೂ 125.70 ಕೋಟಿ ಅನುದಾನವನ್ನು ಬಿಡುಗಡೆಗೊಳಿಸುತ್ತಿದೆ.

ಪಿಂಚಣಿಯನ್ನು ಪಾರದರ್ಶಕವಾಗಿ ವಿಳಂಬವಿಲ್ಲದೇ ಪಾವತಿಸುವ ನಿಟ್ಟಿನಲ್ಲಿ ನೇರ ಹಣ ಸಂದಾಯ ಯೋಜನೆಯನ್ನು ಜಾರಿಗೊಳಿಸಿದ್ದು, ವಿಧವಾ ವೇತನದಡಿ ಫಲಾನುಭವಿಗಳಿಗೆ ಅವರ ಬ್ಯಾಂಕ್/ಅಂಚೆ ಖಾತೆ ಅಥವಾ ಇ-ಮನಿಯಾರ್ಡರ್ ಮೂಲಕ ಪಿಂಚಣಿಯನ್ನು ಎನ್.ಪಿ.ಸಿ.ಐ ಮುಖಾಂತರ ಪ್ರತಿ ತಿಂಗಳು ಪಾವತಿಸಲಾಗುತ್ತಿದೆ. ಒಟ್ಟು 17.72 ಲಕ್ಷ ಫಲಾನುಭವಿಗಳಲ್ಲಿ 16.70 ಲಕ್ಷ ಫಲಾನುಭವಿಗಳು ಬ್ಯಾಂಕ್/ಅಂಚೆ ಖಾತೆ ಮೂಲಕ ಹಾಗೂ 1.02 ಲಕ್ಷ ಫಲಾನುಭವಿಗಳು ಇ-ಮನಿಯಾರ್ಡರ್ ಮೂಲಕ ಪಡೆಯುತ್ತಿದ್ದಾರೆ. ಅಂಚೆ ಇಲಾಖೆಯ ಸಹಯೋಗದೊಂದಿಗೆ ಇ-ಮನಿಯಾರ್ಡರ್ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೂ ಅಂಚೆ ಖಾತೆ ತೆರೆಯುವಲ್ಲಿ ಕ್ರಮ ಪ್ರಗತಿಯಲ್ಲಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಫಲಾನುಭವಿಗಳನ್ನು ನಿಖರವಾಗಿ ಗುರುತಿಸುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಯೋಜನೆಗಳಡಿ ಆಧಾರ್ ಸಂಖ್ಯೆಯನ್ನು ಕಡ್ಡಾಯಗೊಳಿಸಿದೆ. ವಿಧವಾ ವೇತನ ಪಡೆಯುತ್ತಿರುವ ಒಟ್ಟು 17.72 ಲಕ್ಷ ಫಲಾನುಭವಿಗಳಲ್ಲಿ ಇದುವರೆವಿಗೆ 17.02 ಲಕ್ಷ ಫಲಾನುಭವಿಗಳಿಗೆ ಆಧಾರ್ ಸಂಖ್ಯೆ ಜೋಡಣೆಯಾಗಿದೆ. ಉಳಿದ 70615 ಫಲಾನುಭವಿಗಳ ಆಧಾರ್ ಸಂಖ್ಯೆ ಜೋಡಣೆ ಕಾರ್ಯ ಪ್ರಗತಿಯಲ್ಲಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ವಿಧವಾ ವೇತನ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.